**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**O.S. 231/2017** **DW-03**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 30.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ /ಶ್ರೀಮತಿ ಜೆ ಕೆ ಡಿ ವಕೀಲರಿಂದಃ**

1. ಈ ದಾವೆಯನ್ನು ವಾದಿ ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತಾರೆ. ಯಾವ ಆಸ್ತಿಯ ಕುರಿತು ದಾವೆ ಸಲ್ಲಿಸಿದರು ಎಂದು ನನಗೆ ಗೊತ್ತಿಲ್ಲ. ವಾದಿ ತನ್ನ ಮೂರು ಜನ ಅಣ್ಣತಮ್ಮಂದಿರ ವಿರುದ್ಧ ದಾವೆ ಸಲ್ಲಿಸಿದ್ದಾಳೆ. ಮತ್ತೆ ಬೇರೆ ವಿರುದ್ಧ ದಾವೆ ಸಲ್ಲಿಸಿಲ್ಲ. ಈ ದಾವೆಯಲ್ಲಿ ನಾನು ಪಕ್ಷಗಾರನಿಲ್ಲ. ಈ ದಾವೆಯಲ್ಲಿ ನಾನು 10 ನೇ ಪ್ರತಿವಾದಿ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಸಮನ್ಸ ಬಂದಾಗ ನಾನು ಏಕತರ್ಫಿ ಉಳಿದಿದೆ ಎಂದರೆ ನನಗೆ ನೆನಪಿಲ್ಲ. ಸಮನ್ಸ ಬಂದರೂ ಸಹ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಪತ್ರ ಬರೆಯಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಈ ದಾವೆಯಲ್ಲಿ 10 ನೇ ಪ್ರತಿವಾದಿ ಇದ್ದರೂ ಸಹ ಅದನ್ನು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಿಃ 05-09-1983 ರಂದು ಸದರಿ ಮೃತ್ಯು ಪತ್ರವನ್ನು ಬರೆದಿದನ್ನು ನಾನು ನೋಡಿಲ್ಲ. ಆಗ ನಾನು ಬೇರೆ ಊರಿನಲ್ಲಿದ್ದೆ. ನಮ್ಮ ತಂದೆ ಮರಣ ಹೊಂದಿದ ನಂತರ ಮೃತ್ಯು ಪತ್ರದ ಬಗ್ಗೆ ನಮಗೆ ಗೊತ್ತಾಯಿತು. ಮನೆಯಲ್ಲಿ ಅದರ ಬಗ್ಗೆ ಮಾತನಾಡುತ್ತಿದ್ದರು ನನಗೆ ಅವಾಗ ಗೊತ್ತಾಯಿತು. ಪ್ರತಿವಾದಿ ನಂ.6 ರಿಂದ 13 ಯಾರೆಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ರಿಂದ 4 ರವರು ಯಾರೆಂದು ನನಗೆ ಗೊತ್ತಿಲ್ಲ. ಮೃತ್ಯು ಪತ್ರದ ಪತ್ರದ ಪ್ರಕಾರ ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಂತೆ ನಾನು ಮತ್ತು 6 ರಿಂದ 13 ಪ್ರತಿವಾದಿಗಳು ಹಾಗೂ ಪ್ರತಿವಾದಿ ನಂ. 1 ರಿಂದ 4 ರವರು ಹೇಗೆ ನಡೆದುಕೊಂಡಿವೆ ಎಂದು ಹೇಳಲಾಗುವುದಿಲ್ಲ. ದಾವಾಗೆ ಸಂಬಂದಪಟ್ಟ ದಾಖಲೆಗಳನ್ನು ನಾನು ತೆಗೆಸಿ ನೋಡಿಲ್ಲ. ನನಗೆ ಓದಲು ಬರೆಯಲು ಬರುತ್ತದೆ. ನನ್ನ ತಂದೆ ಮರಣ ಹೊಂದಿದ ನಂತರ ನಿಪಿ 1 ಪ್ರಕಾರ ವಾರಸಾನಾತೆಯಿಂದ ವಾದಿ ಮತ್ತು ಎಲ್ಲಾ ಮಕ್ಕಳ ಹೆಸರು ನಮೂದು ಆಗಿದೆ ಎಂದರೆ ಸರಿ. ಮೃತ್ಯು ಪತ್ರದ ಪ್ರಕಾರ ಹೆಸರು ನಮೂದು ಮಾಡಲು ಅರ್ಜಿ ಕೊಟ್ಟಿದ್ದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂದಪಟ್ಟಂತೆ ನನಗೆ ಬೇರೆ ಏನು ಗೊತ್ತಿಲ್ಲ. ನನ್ನ ತಂದೆ ಬಸಪ್ಪ ಮರಣ ಹೊಂದುವಕ್ಕಿಂತ 2-3 ವರ್ಷಗಳ ಹಿಂದೆ ಅವರು ಪಾಶ್ವವಾಯು ಕಾಯಿಲೆಯಿಂದ ಬಳಲುತ್ತಿದ್ದರು ಎಂದರೆ ಸರಿ. ಮಾನಸಿಕವಾಗಿ

ಅಸ್ತವ್ಯಸ್ಥವಾಗಿದ್ದರು ಎಂದರೆ ಸರಿಯಲ್ಲ. ಮೃತ್ಯು ಪತ್ರದಲ್ಲಿ ಏನು ಬರೆದಿದೆ ಎಂದು ನಾನು ಓದಿ ತಿಳಿದುಕೊಂಡಿಲ್ಲ. ಚಂಪಾವತಿಗೆ ದಿಃ 05-03-1989 ರ ಮೃತ್ಯು ಪತ್ರದಲ್ಲಿ ಬರೆದಂತೆ ಗುರುಶಿದ್ದಪ್ಪಾ, ಗಂಗಾಧರ, ಸಿದ್ದಪ್ಪ ಮತ್ತು ಹುಚ್ಚಪ್ಪ 10 ಸಾವಿರ ರೂ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಹಣವನ್ನು ನನ್ನ ಸಮಕ್ಷಮ ಕೊಟ್ಟಿಲ್ಲ ದಿಃ 15-05-1989 ರಂದು ಹಣ ಕೊಡದ ಕಾರಣ ಅಭಿನಂದನಾ ಪ್ರಮಾಣ ಪತ್ರ ಬರೆದುಕೊಟ್ಟಿದ್ದಾರೆಂದು ಮುಖ್ಯ ವಿಚಾರಣೆಯಲ್ಲಿ ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

2.ನಿಡಿ 19 ಅಭಿನಂದನಾ ಪ್ರಮಾಣಪತ್ರದ ಬಾಂಡನ್ನು ಯಾರು ತಂದಿದ್ದಾರೆಂದು ಗೊತ್ತಿಲ್ಲ. ನಿಡಿ 19 ರಲ್ಲಿ ಬರೆದ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಡಿ 19 ರಲ್ಲಿರುವ ಇಂಗ್ಲಿಷ ಮತ್ತು ಕನ್ನಡದಲ್ಲಿರುವ ಸಹಿ ನನ್ನದೇ. ಆವಾಗ ಅಷ್ಟೊಂದು ತಿಳುವಳಿಕೆ ಇರಲಿಲ್ಲ. ಎರಡೂ ಭಾಷೆಯಲ್ಲಿ ಸಹಿ ಮಾಡಿದ್ದೆನು. ಈಗ ಒಂದೇ ಭಾಷೆಯಲ್ಲಿ ಸಹಿ ಮಾಡುತ್ತೇನೆ. ಮುಖ್ಯ ವಿಚಾರಣೆಯಲ್ಲಿ ಇರುವ ಸಹಿ ನನ್ನದೇ. ನಿಡಿ 19 ರಲ್ಲಿರುವ ಸಹಿಗೂ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಎರಡೂ ಸಹಿಗಳು ವ್ಯತ್ಯಾಸ ಇದ್ದರೂ ಒಂದೇ ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 19 ನ್ನು ಎಲ್ಲಿ ಬರೆದರೂ ಎಂದು ನನಗೆ ಮಾಹಿತಿ ಇಲ್ಲ. ನಾನು ಯಾವ ದಿನದಂದು ಸಹಿ ಮಾಡಿದ್ದೆನೆಂದು ನನಗೆ ನೆನಪಿಲ್ಲ. ನಿಡಿ 19 ಬರೆಯುವಾಗ ಯಾರು ಯಾರು ಇದ್ದರೂ ಎಂದು ನನಗೆ ಗೊತ್ತಿಲ್ಲ. ಮೃತ್ಯು ಪತ್ರವನ್ನು ಸಾಬೀತು ಪಡಿಸಲು ನಿಡಿ 19 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ.

3.ವಾದಿ ಚಂಪಾವತಿಯವರ ಸಹಿಯನ್ನು ನನಗೆ ಗುರುತಿಸಲು ಆಗುವುದಿಲ್ಲ. ನಿಡಿ 19 ರಲ್ಲಿರುವ ವಾದಿ ಚಂಪಾವತಿಯ ಸಹಿಗೂ ವಾದ ಪತ್ರದಲ್ಲಿರುವ ಚಂಪಾವತಿಯ ಸಹಿಗೂ ಹೋಲಿಕೆ ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ಸಿ ಎನ್ ಚಂಪಾವತಿ ಅಂತಾ ಇದೆ. ನಿಡಿ 19 ರಲ್ಲಿ ಎನ ಚಂಪಾವತಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 19 ರಲ್ಲಿ ಸಹಿ ಮಾಡಿದ ನಂತರ ವಿಷಯ ಮುಂದುವರೆದು ಬರೆದಿದ್ದಾರೆ ಎಂದರೆ ಸರಿ. ಈ ದಾವೆಯಲ್ಲಿ ನಾನು 10 ನೇ ಪ್ರತಿವಾದಿ ಇದ್ದೇನೆ ವಕೀಲರ ಮೂಲಕ ಹಾಜರಾಗಿ ದಾವೆ ಖೊಟ್ಟಿ ಇದೆ ಅಂತಾ ತಕರಾರು ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮೃತ್ಯು ಪತ್ರ ಮತ್ತು ನಿಡಿ 19 ದಾಖಲೆ ಖೊಟ್ಟಿ ಇದೆ ಪ್ರತಿವಾದಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುರುಶಿದ್ದಪ್ಪಾ, ಗಂಗಾಧರ, ಸಿದ್ದಪ್ಪ ಮತ್ತು ಹುಚ್ಚಪ್ಪ ಇವರು ಚಂಪಾವತಿಗೆ 10 ಸಾವಿರ ರೂ ಕೊಟ್ಟಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಂಪಾವತಿ ನಿಡಿ 19 ನ್ನು ಬೆರದುಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**O.S. 231/2017** **DW-05**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 30.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜೆ ಕೆ ಡಿ ವಕೀಲರಿಂದಃ**

ಈ ದಾವೆಯನ್ನು ನಮ್ಮ ಅಕ್ಕ ಅಣ್ಣ ತಮ್ಮಂದಿರ ಮೇಲೆ ಸಲ್ಲಿಸಿದ್ದಾರೆ. ಹೊಲ ಮನೆಯ ಸಲುವಾಗಿ ವಾದಿ ದಾವೆ ಸಲ್ಲಿಸಿದ್ದಾಳೆ. ಈ ದಾವೆಯಲ್ಲಿ ನನಗೆ ಸಮನ್ಸ ಬಂದಿಲ್ಲ. ಈ ದಾವೆಯಲ್ಲಿ ನಾನು 8 ನೇ ಪ್ರತಿವಾದಿ ಇದ್ದು ನಾನು ಏಕತರ್ಪಿ ಇದ್ದೆನೆ ಎಂದರೆ ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಯಲು ಮಾಹಿತಿಯನ್ನು ನಾನೇ ನೀಡಿದ್ದೇನೆ. ಈ ದಾವೆಯಲ್ಲಿ ಪ್ರತಿವಾದಿ ನಂ. 1 ರಿಂದ 4 ಮತ್ತು 6 ರಿಂದ 13 ಯಾರು ಎಂದು ನನಗೆ ಹೇಳಲು ಆಗುವುದಿಲ್ಲ. ದಿಃ 05-09-1983 ರಂದು ಆದ ಮೃತ್ಯು ಪತ್ರದ ಪ್ರಕಾರ ನಾವು ನಡೆದುಕೊಂಡಿದ್ದೇವೆ. ನನ್ನ ಗಂಡನ ಹೆಸರು ಕುಬೇರಪ್ಪಾ ಈಗ ಅವರು ಮರಣ ಹೊಂದಿರುತ್ತಾರೆ. ನನ್ನ ಗಂಡ 1999 ರಲ್ಲಿ ಮರಣ ಹೊಂದಿರುತ್ತಾರೆ. ಮೃತ್ಯು ಪತ್ರದ ಮಾಡುವಾಗ ನಾನು ಇದ್ದೇನು. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಮೃತ್ಯು ಪತ್ರ ಬರೆಯುವಾಗ ನಾನು ಹಾಜರು ಇದ್ದೇನು ಅಂತಾ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮೂಲ ಮೃತ್ಯು ಪತ್ರವನ್ನು ನಾನು ನೋಡಿದ್ದೇನೆ. ಈಗ ಮೃತ್ಯು ಪತ್ರ ಗಂಡು ಮಕ್ಕಳ ಹತ್ತಿರ ಇದೆ. ಮುಖ್ಯ ವಿಚಾರಣೆ ಸಲ್ಲಿಸುವ ಪೂರ್ವದಲ್ಲಿ ಮೂಲ ಮೃತ್ಯು ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಚಂಪಾವತಿ ಮನೆ ಕಟ್ಟುತ್ತಿದ್ದಾಳೆ ಎಲ್ಲರೂ ಸಹಾಯ ಮಾಡಬೇಕೆಂದು ಸದರಿ ಮೃತ್ಯು ಪತ್ರದಲ್ಲಿ ಬರೆಯಲಾಗಿದೆ ಅದನ್ನು ಹೊರತುಪಡಿಸಿ ಬೇರೆ ಏನು ಇಲ್ಲ. ನನ್ನ ತಂದೆ ಮರಣ ಹೊಂದುವುಕ್ಕಿಂತ 2-3 ವರ್ಷ ಅನಾರೋಗ್ಯವಾಗಿದ್ದರೂ ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿದ ಇಸವಿ ನನಗೆ ನೆನಪಿಲ್ಲ. ನಿಡಿ 9 ರಲ್ಲಿ ನಮ್ಮ ತಂದೆ ಅರ್ಧಾಂಗ ವಾಯು ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದೇನೆ ಎಂದು ಬರೆದಿದ್ದಾರೆ ಎಂದರೆ ಸರಿ. ನನ್ನ ತಂದೆ ಮಾನಸಿಕವಾಗಿ ಚೆನ್ನಾಗಿ ಇರಲಿಲ್ಲ ಸ್ಥಿತಿ ಗತಿ ಗೊತ್ತಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಹಾಜರಾಗಿ ದಾವೆ ಖೊಟ್ಟಿ ಇದೆ ಎಂದು ತಕರಾರು ಸಲ್ಲಿಸಲು ನನೆಗೆ ತೊಂದರೆ ಇಲ್ಲ. ವಾದಿಗೆ ಆಸ್ತಿ ಕೊಡಬಾರದು ಎಂದು ನಾನು ಮತ್ತು ನನ್ನ ಅಣ್ಣತಮ್ಮಂದಿರು ಸೇರಿ ನಿಡಿ 9 ಮೃತ್ಯು ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮೃತ್ಯು

ಪತ್ರದ ಪ್ರಕಾರ ಕಂದಾಯ ಇಲಾಖೆಯಲ್ಲಿ ಹೆಸರು ನಮೂದು ಮಾಡಲು ಅರ್ಜಿ ಕೊಟ್ಟಿಲ್ಲ. ನಿಪಿ 1 ರಲ್ಲಿ ನನ್ನ ತಂದೆ ಮರಣ ಹೊಂದಿದ ನಂತರ ಚಂಪಾವತಿರವರ ಹೆಸರು ಮತ್ತು ನಮ್ಮ ಹೆಸರು ವಾರಸನಾತೆಯಿಂದ ನಮೂದು ಆಗಿದೆ ಎಂದರೆ ಸರಿ. ಚಂಪಾವತಿಯ ಹೆಸರು ದಾಖಾಲಾಗಿರುವುದರಿಂದ ಆಸ್ತಿಯಲ್ಲಿ ಪಾಲು ಕೇಳುತ್ತಾಳೆಂದು ನಾನು ಮತ್ತು ನಮ್ಮ ಅಣ್ಣತಮ್ಮಂದಿರು ನಿಡಿ 9 ಮತ್ತು 19 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಡಿ 19 ನ್ನು ಯಾರು ಯಾರಿಗೆ ಬರೆದುಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ನಿಡಿ 19 ರ ಬಗ್ಗೆ ಚಂಪಾವತಿ ಮಾಹಿತಿ ಕೊಟ್ಟಿದ್ದಾಳೆ. ನಿಡಿ 19 ರ ಬಗ್ಗೆ ಚಂಪಾವತಿ ಹೇಳಿದ್ದಾಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 19 ರ ಬಗ್ಗೆ ಚಂಪಾವತಿ ಹೇಳಿದ್ದಾಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದೆ ನನಗೆ ಗೊತ್ತಿಲ್ಲ. ಚಂಪಾವತಿ ಹೇಳಿದ್ದಾಳೆಂದು ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಯಾರು ಯಾರಿಗೆ ಹಣ ಕೊಟ್ಟರು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಗೊತ್ತಿಲ್ಲ ಸಾಕ್ಷಿ ಸ್ವತಃ ಹೇಳುತ್ತಾರೆ ಚಂಪಾವತಿಗೆ ಏನು ಬರುತ್ತಿತ್ತು ಅದನ್ನು ಕೊಟ್ಟಿದ್ದಾರೆಂದು ನುಡಿಯುತ್ತಾರೆ. ಗುರಶಿದ್ದಪ್ಪಾ, ಗಂಗಾಧರ,ಸಿದ್ದಪ್ಪ ಮತ್ತು ಹುಚ್ಚಪ್ಪ ನನ್ನ ಸಮಕ್ಷಮ 10 ಸಾವಿರ ಚಂಪಾವತಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವುದೇ ಹಣವನ್ನು ಚಂಪಾವತಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ 19 ರ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪ್ರಮಾಣ ಪತ್ರದಲ್ಲಿ ನಿಡಿ 19 ನ್ನು ಬರೆದುಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಆಸ್ತಿಯಲ್ಲಿ ಹಕ್ಕು ಕೊಡಬಾರದು ಎಂದು ನಾವು ಮತ್ತು ಅಣ್ಣತಮ್ಮಂದಿರು ನಿಡಿ 9 ಮತ್ತು 19 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಿಃ 05-09-1983 ರಂದು ನನ್ನ ತಂದೆ ನಿಡಿ 9 ಮೃತ್ಯು ಪತ್ರ ಬರೆದಿಲ್ಲ ಎಂದರೆ ಸರಿಯಲ್ಲ. ಮೃತ್ಯು ಪತ್ರ ಬರೆಯುವಾಗ ಯಾರು ಯಾರು ಇದ್ದರೂ ನನಗೆ ಮಾಹಿತಿ ಇದೆ. ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**O.S. 231/2017** **DW-04**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 30.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜೆ ಕೆ ಡಿ ವಕೀಲರಿಂದಃ**

ಚಂಪಾವತಿ ಈ ದಾವೆಯನ್ನು ಅವರ ಅಣ್ಣತಮ್ಮಂದಿರ ವಿರುದ್ಧ ಸಲ್ಲಿಸಿದ್ದಾಳೆ. ನಿಡಿ 9 ನ್ನು ನಾನು ಖುದ್ದಾಗಿ ನೋಡಿಲ್ಲ. ಗಂಗಾಧರ ನಿಡಿ 9 ರ ಬಗ್ಗೆ ಹೇಳಿದರು. ನ್ಯಾಯಾಲಯದಿಂದ ಸಮನ್ಸ ಬಂದಿತ್ತು ಆ ಕಾರಣದಿಂದ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಮುಖ್ಯ ವಿಚಾರಣೆಯಲ್ಲಿ ಬರೆದ ವಿಷಯದ ಬಗ್ಗೆ ನನಗೆ ಮಾಹಿತಿ ಇದೆ. ಮೃತ್ಯು ಪತ್ರದಲ್ಲಿ ಬರೆದಂತೆ 4 ಜನ ಅಣ್ಣತಮ್ಮಂದಿರು ಚಂಪಾವತಿಗೆ 10 ಸಾವಿರ ಹಣ ಕೊಡಬೇಕು ಅಂತಾ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ. 10 ಸಾವಿರ ರೂ ಕೊಟ್ಟ ನಂತರ ನಿಡಿ 19 ನ್ನು ಸಬ್ ರಿಜಿಸ್ಟರ ಕಚೇರಿಯಲ್ಲಿ ನೊಂದಾದ ನಂತರ ನಾನು ಸಾಕ್ಷಿ ಅಂತಾ ಸಹಿ ಮಾಡಿದ್ದೇನೆ. ನಿಡಿ 19 ರ ಬಾಂಡನ್ನು ಯಾರು ತಂದಿರುತ್ತಾರೆಂದು ನನಗೆ ಮಾಹಿತಿ ಇಲ್ಲ. ನಿಡಿ 19 ನ್ನು ಯಾರು ಬರೆದರು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. 1989 ರಲ್ಲಿ ನಿಡಿ 19 ಆಯಿತು. ನಿಡಿ 19 ರಲ್ಲಿ ಸಹಿ ಮಾಡಿದ ನಂತರ ವಿಷಯ ಬರೆದಿರುತ್ತಾರೆಂದರೆ ಸರಿ. ಚಂಪಾವತಿಯ ಸಹಿಯನ್ನು ನನಗೆ ಗುರುತಿಸಲು ಆಗುವುದಿಲ್ಲ. ನಿಡಿ 19 ರಲ್ಲಿ ಚಂಪಾವತಿಯ ಸಹಿ ಮಾಡಿರಬಹುದು ಆದರೆ ನಾನು ನೋಡಿಲ್ಲ. ಎಲ್ಲಾ ಬರೆದ ನಂತರ ನಾನು ಸಾಕ್ಷಿದಾರನೆಂದು ಕೊನೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಬರೆದ ವಿಷಯ ನನಗೆ ಗೊತ್ತು. ನಿಡಿ 19 ಕ್ಕೆ ಗಲಗಲಿ ಮತ್ತು ವೆಂಕಟೇಶ ಸವದತ್ತಿ ಎಂಬುವವರು ಸಹಿ ಮಾಡಿದ್ದಾರೆ. ಚಂಪಾವತಿಯವರು ನಿಡಿ 19 ನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ 19 ಸೃಷ್ಟಿ ಮಾಡಿದ ದಾಖಲೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಸಿದಂತೆ ಚಂಪಾವತಿಗೆ 10 ಸಾವಿರ ರೂ ಗಳನ್ನು ಗುರಶಿದ್ದಪ್ಪಾ ,ಗಂಗಾಧರ, ಸಿದ್ದಪ್ಪ ಮತ್ತು ಹುಚ್ಚಪ್ಪ ಇವರು ನನ್ನ ಸಮಕ್ಷಮ ಕೊಟ್ಟಿಲ್ಲ. ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.